ಬೆಂಗಳೂರಿಗೂ ಹಾಲನ್ನು ಸೊಲ್ಲಾಪುರದಿಂದ ತರುತ್ತೇವೆ. ಆದುದರಿಂದ ಹಾಲಿನ ಉತ್ಪತ್ತಿ ಜಾಸ್ತಿಯಾದರೆ ಅದರ ಬಗ್ಗೆ ವಿಚಾರಣೆ ಮಾಡೋಣ.

ಶ್ರೀ ಪಿ.ಸಿ. ಸಿದ್ದನಗೌಡರ್ : ಮಾನ್ಯ ಅಧ್ಯಕ್ಷರೆ, ಧಾರವಾಡ ಹಾಲಿನ ಕೇಂದ್ರಕ್ಕೆ ಸೊಲ್ಲಾಪುರದಿಂದ ಹಾಲನ್ನು ತರುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆದರೆ ಧಾರವಾಡದಲ್ಲಿ ಅನೇಕ ಗ್ರಾಮಾಂತರ ಪ್ರದೇಶದಲ್ಲಿ ಹಾಲಿನ ಸೊಸೈಟಿಯನ್ನು ತೆರೆಯಲು ಅನೇಕ ಮಂದಿ ಮುಂದೆ ಬಂದಿದ್ದಾರೆ. ಆದರೆ ಅಲ್ಲಿರತಕ್ಕಂತಹ ಕೆಲವು ಅಧಿಕಾರಿಗಳು ಮತ್ತು ಕೆಲವು ಕಾನೂನಿನ ಅಡೆತಡೆಯಿಂದಾಗಿ ಈ ರೀತಿಯ ಸೊಸೈಟಿಯನ್ನು ತೆರೆಯಲು ಅಲ್ಲಿನ ಜನಗಳಿಗೆ ತೊಂದರೆಯಾಗಿದೆ. ಇದನ್ನೆಲ್ಲಾ ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ : ಹೆಚ್ಚು ಹೆಚ್ಚು ಹಾಲಿನ ಸಹಕಾರ ಸಂಸ್ಥೆಗಳನ್ನು ಈ ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಾಪನೆ ಮಾಡಲು ಸರ್ಕಾರ ಉದ್ದೇಶಿಸಿದೆ. ಆದುದರಿಂದ ನಿರ್ಬಂಧಗಳಾವುವು ಇಲ್ಲ. ಏಕಸ್ವಾತ್ ಅಧಿಕಾರಿಗಳಿಂದೇನಾದರೂ ನಿರ್ಬಂಧ ಹಾಕಿದ್ದರೆ, ಇವತ್ತೇ ಅದನ್ನು ಕಿತ್ತು ಹಾಕುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ : ಅವರು ಕೇಳುವ ಪ್ರಶ್ನೆಗೆ ತಾವು ಐ.ಡಿ.ಬಿ.ಐ.ಗೆ ಬರೆದು ಕ್ರಮ ತೆಗೆದುಕೊಳ್ಳಿ.

ಶ್ರೀ ಬಿ. ಬಸವಲಿಂಗಪ್ಪ : ಅಲ್ಲಿಗೆ ಬರೆಯಿರಿ ಇಲ್ಲಿಗೆ ಬರೆಯಿರಿ ಎಂಬುದನ್ನು ನಮಗೆ ಬಿಡಿ ನೀವು ಹಾಲಿನ ಉತ್ಪತ್ತಿಯನ್ನು ಜಾಸ್ತಿ ಮಾಡಿ. ಮತ್ತು ಹಾಲಿನ ಸಹಕಾರ ಸಂಘಗಳನ್ನು ಜಾಸ್ತಿ ಮಾಡಿ.

ಕುಡಿಯುವ ನೀರಿನ ಕಿರು ಬಾವಿಗಳನ್ನೊದಗಿಸುವುದು.

1428 - ಶ್ರೀಮತಿ ಚಂದ್ರಪ್ರಭಾ ಅರಸು (ಹುಣಸೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವ ನೀರಿನ ತೀವ್ರ ಅಭಾವವಿದ್ದು ಕಿರು ನೀರು ಕುಡಿಯುವ ನೀರು ಬಾವಿಗಳನ್ನು ಒದಗಿಸಲು 1980ನೇ ಜನಗಣತಿ ಆಧಾರ ಸೂಕ್ತವಲ್ಲವೇ?

ಆ) ಈ ನಿಬಂಧನೆಯನ್ನು ಸಡಿಲಿಸಿ ಎರಡು ಅಥವಾ ಮೂರು ಸಣ್ಣ ಹಳ್ಳಿಗಳನ್ನು ಕೂಡಿಸಿ ಒಂದು ಕಿರಿನೀರು ಕುಡಿಯುವ ಬಾವಿ ಯೋಜನೆ ಹಾಕಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಇ) ಹುಣಸೂರು, ಮೈಸೂರು ಜಿಲ್ಲೆಯಲ್ಲಿ ಎಷ್ಟು ಕುಡಿಯುವ ಕಿರು ನೀರು ಯೋಜನೆ ಬಾವಿಗಳಿವೆ, ಮತ್ತು ಇನ್ನು ಮುಂದೆ ವರ್ಷಂಪ್ರತಿ ಎಷ್ಟು ಕಿರು ನೀರು ಯೋಜನೆಗಳನ್ನು ಮಾಡಲಾಗುವುದು?

ಈ) ಕೆಲವು ಸಮಸ್ಯಾತ್ಮಕ ಹಳ್ಳಿಗಳಲ್ಲಿ ಅನೇಕ ಬೋರ್‌ವೆಲ್ ಹಾಕಿದ್ದರೂ ಸಂಪೂರ್ಣ ನಿಷ್ಪಯೋಜಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಪ್ರಸ್ತುತ ನಿಯಮಾವಳಿಗಳ ಪ್ರಕಾರ 1981 ರ ಜನಗಣತಿಯನ್ನು ಆಧರಿಸಿ ಕಿರು ನೀರು ಸರಬರಾಜು ಯೋಜನೆಗಳನ್ನು ಮತ್ತು ಇತರೆ ನೀರು ಸರಬರಾಜು ಯೋಜನೆಗಳನ್ನು ಕೈಗೊಳ್ಳಲಾಗುತ್ತಿದೆ..

ಆ) ಅವಶ್ಯಕತೆ ಇದ್ದಲ್ಲಿ ಹಾಗೂ ಅನಿವಾರ್ಯ ಪರಿಸ್ಥಿತಿಯಲ್ಲಿ ಸೂಕ್ತ ಜಲಮೂಲ ದೊರಕುವುದನ್ನು ಆಧರಿಸಿ ಸಂಯುಕ್ತ ಕಿರು ನೀರು ಯೋಜನೆಗಳನ್ನು ಕೈಗೊಳ್ಳಲಾಗುತ್ತಿದೆ.

ಇ) ಹುಣಸೂರು ತಾಲ್ಲೂಕಿನಲ್ಲಿ 31-3-90ರ ಅಂತ್ಯದವರೆಗೆ 19 ಕಿರು ನೀರು ಯೋಜನೆ ಇದ್ದು, 1990-91ನೇ ಸಾಲಿನಲ್ಲಿ 12 ಕಿರು ನೀರು ಯೋಜನೆಗಳನ್ನು ಅನುಮೋದಿಸಲಾಗಿದೆ. ಜನಸಂಖ್ಯೆ 500ರಿಂದ 1000 ದವರೆಗೆ, ಇನ್ನುಳಿದ ಗ್ರಾಮ ಜನವಸತಿಗಳಿಗೆ ಹಂತಹಂತವಾಗಿ ಕಿರು ನೀರು ಯೋಜನೆಗಳನ್ನು ಅನುದಾನ ಒದಗಿದಾಗ ಮುಂದಿನ ವರ್ಷಗಳಲ್ಲಿ ಕೈಗೊಳ್ಳಲಾಗುವುದು.

ಈ) ಹೌದು, ಕೊರೆದಿರುವ ಕೊಳವೆ ಬಾವಿಗಳು ವಿಫಲವಾಗಿರುವೆಡೆಯಲ್ಲಿ ಭೂ ಬೌತಿಕ ಸರ್ವೇಕ್ಷಣೆಯಿಂದ ಹೆಚ್ಚುವರಿ ಕೊಳವೆ ಬಾವಿಗಳನ್ನು ಗುರುತಿಸಿ ಕೊರೆಯುವ ಕೆಲಸ ಕೈಗೊಳ್ಳಲಾಗುತ್ತಿದೆ.

ಶ್ರೀಮತಿ ಚಂದ್ರಪ್ರಭಾ ಅರಸ್ : ಮಾನ್ಯ ಅಧ್ಯಕ್ಷರೆ, 1981ನೇ ಇಸವಿಯ ಜನಸಂಖ್ಯೆಯ ಆಧಾರದ ಮೇಲೆ ಈ ಕುಡಿಯುವ ನೀರಿನ ಕಿರು ಯೋಜನೆಯನ್ನು ಮಾಡತಕ್ಕ ಒಂದು ಕಾರ್ಯಕ್ರಮ ಜಾರಿಮಾಡುವುದನ್ನು ಈ ಒಂದು ಇಲಾಖೆ ಇಟ್ಟುಕೊಂಡಿದೆ. ಆದರೆ ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಬಯಸುವುದೇನೆಂದರೆ, ಹತ್ತು ವರ್ಷದ ಹಿಂದಿನ ಜನಸಂಖ್ಯೆಯ ಆಧಾರದ ಮೇಲೆ ಇದನ್ನು ಮಾಡಿದೆ, ಈಗ ಜನಸಂಖ್ಯೆ ಏರಿದ್ದೂ ಕೆಲವು ಕಡೆ ಸಮಸ್ಯಾತ್ಮಕ ಹಳ್ಳಿಗಳು ಇದ್ದೂ ಎಷ್ಟು ಕೊಳವೆ ಬಾವಿಗಳನ್ನು ಕೊರೆದರೂ ನೀರಿನ ಅಭಾವ ಕಡಿಮೆಯಾಗಿಲ್ಲ. ಅದರಲ್ಲೂ ಇತ್ತೀಚಿಗೆ ಮಳೆಯು ಬಾರದೆ ಅಭಾವದಿಂದ ಬರಗಾಲ ಪ್ರದೇಶಗಳು ಅದರಲ್ಲಿಯೂ ಮೈಸೂರು ಜಿಲ್ಲೆಯ ಕೆಲವೊಂದು ತಾಲ್ಲೂಕುಗಳಲ್ಲಿ ಹಾಗೂ ನನ್ನ ಕ್ಷೇತ್ರವಾದ ಹುಣಸೂರಿನಲ್ಲಿಯೂ ಸಹ ತೀವ್ರವಾದ ಕುಡಿಯುವ ನೀರಿನ ಬವಣೆಯನ್ನು ಜನರು ಪಡುತ್ತಿದ್ದಾರೆ. ಈ ಸಂದರ್ಭದಲ್ಲಿ ಹೆಚ್ಚು ಹೆಚ್ಚು ಕಿರು ನೀರಾವರಿ ಯೋಜನೆಗಳನ್ನು ಕೈಗೊಳ್ಳಬೇಕೆಂದು ಈಗಾಗಲೇ ಟೆಕ್ನಿಕಲ್ ರೀಪೋರ್ಟ್ ಮತ್ತು ಎಸ್ಟಿಮೇಟ್‌ಗಳನ್ನು ಸಂಬಂಧಪಟ್ಟ ಇಲಾಖೆಗೆ ಕಳುಹಿಸಿಕೊಟ್ಟಿದ್ದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿರಬಹುದೆಂದು ತಿಳಿದುಕೊಂಡಿದ್ದೇನೆ ಆದುದರಿಂದ ಇದನ್ನು ಟೈಮ್ ಬಾಂಡ್ ಪ್ರೋಗ್ರಾಮ್ ಇಟ್ಟು ಪ್ರತಿ ವರ್ಷ ಕೆಲವೊಂದು ಯೋಜನೆಗಳನ್ನು ಮಾಡುವುದಾದರೆ ಇಂತಹ ಕುಡಿಯುವ ನೀರಿನ ಸಮಸ್ಯಯನ್ನು ಸ್ವಲ್ಪಮಟ್ಟಿಗೆ ನೀಗಿಸಬಹುದು. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ ಹೇಳುತ್ತಾ ಕುಡಿಯುವ ನೀರಿನ ಬಗ್ಗೆ ಹೆಚ್ಚಿನ ಆದ್ಯತೆಯನ್ನು ಕೊಡುತ್ತೇವೆ. ಅದರಲ್ಲಿಯೂ ಅಭಾವ ಹೆಚ್ಚು ಇರತಕ್ಕಂತಹ ಪ್ರದೇಶದಲ್ಲಿ ಕೊಡುತ್ತೇವೆ ಎಂದು ಈ ಸಭೆಯಲ್ಲಿಯೇ ಹೇಳಿದ್ದಾರೆ. ನಾನು ತಮ್ಮ ಮುಖಾಂತರ ಗ್ರಾಮೀಣ ಅಭಿವೃದ್ಧಿ ಮಂತ್ರಿಗಳನ್ನು ಕೇಳುತ್ತೇನೆ. ಈ ವರ್ಷಕ್ಕೆ ಮತ್ತೆ ಎಷ್ಟು ಯೋಜನೆಗಳನ್ನು ಮಂಜೂರು ಮಾಡಿಕೊಡುತ್ತೀರಿ? ಮತ್ತೆ ಈಗ ಸಾಕಷ್ಟು ಬೋರ್‌ವೆಲ್‌ಗಳು ಕೆಟ್ಟಿವೆ, ಅವುಗಳ ದುರಸ್ತಿಯಾಗುತ್ತಿಲ್ಲ, ಮಿನಿ ವಾಟರ್ ಸ್ಕೀಮ್‌ಗಳನ್ನು ಕೆಲವೊಂದನ್ನಾದರು ಪ್ರತಿ ವರ್ಷ ಮಾಡತಕ್ಕ ಕ್ರಮವನ್ನು ಇಟ್ಟುಕೊಂಡರೆ ಈ ಕುಡಿಯುವ ನೀರಿನ ಅಭಾವವನ್ನು ಕಡಿಮೆ ಮಾಡಬಹುದು. ಯಾಕೆಂದರೆ ಮೇಲಟ್ಟದಲ್ಲಿ ಹಾಕತಕ್ಕ ಬೋರ್‌ವೆಲ್‌ಗಳಲ್ಲಿ ಅದರ ನೀರಿನ ಮಟ್ಟ ಕೆಳಗಡೆ ಹೋಗಿ ಅನೇಕ ರೀತಿಯ ವಿಫಲತೆಗಳು ಉಂಟಾಗುತ್ತದೆ.

ಕೆರೆಯ ಅಂಗಳದಲ್ಲಿ ಮತ್ತೆ ಸ್ವಲ್ಪ ದೂರದಲ್ಲಿ ಹೋಗಿ 2-3 ಸಣ್ಣ ಹಳ್ಳಿಗಳನ್ನು ಸೇರಿಸಿ 91ರ ಜನಸಂಖ್ಯೆಯ ಆಧಾರ ಇಟ್ಟುಕೊಂಡು ಮಾಡಿದರೆ ಇದು ಯಶಸ್ವಿಯಾಗಬಲ್ಲದು ಎನ್ನುವ ಮಾತನ್ನು ಹೇಳಿ ಈ ಬಗ್ಗೆ ಮಾನ್ಯ ಸಚಿವರು ಸಮರ್ಪಕವಾಗಿ ಉತ್ತರ ಕೊಡುತ್ತಾರೆಂದು ತಿಳಿದುಕೊಂಡಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ : ಸನ್ಮಾನ್ಯ ಅಧ್ಯಕ್ಷರೇ, ಹುಣಸೂರು ತಾಲ್ಲೂಕಿನಲ್ಲಿ ಹಾಲಿ 19 ಕಿರು ನೀರು ಸರಬರಾಜು ಯೋಜನೆ, 38 ನೀರು ಸರಬರಾಜು ಯೋಜನೆ ಹಾಗೂ 875 ಕೈಪಂಪು ಸಹಿತ ಕೊಳವೆ ಬಾವಿಗಳು ಇರುತ್ತವೆ. 90-91ರ ಸಾಲಿನಲ್ಲಿ ಒಟ್ಟಾರೆ 12 ಕಿರು ನೀರು ಸರಬರಾಜು ಯೋಜನೆ 13 ಕೊಳವೆ ಬಾವಿ ಯೋಜನೆ ಹಾಗೂ ಒಂದು ನೀರು ಸರಬರಾಜು ಯೋಜನೆಗೆ ಅನುಮೋದನೆ ನೀಡಲಾಗಿರುತ್ತದೆ. ನಾನು ಒಂದು ಮಾತು ಹೇಳಬೇಕೆಂದರೆ, ಇಷ್ಟು ಕೊಳವೆ ಬಾವಿಗಳನ್ನು ಭೂಮಿಯಲ್ಲಿ ಕೊರೆಯುತ್ತಾ ಕೊರೆಯುತ್ತಾ ಹೋಗಿ ಇವತ್ತು ಮಾನ್ಯ ನಸೀರ್ ಸಾಹೇಬರು ಇಲ್ಲ, ಅವರ ಒಂದು ಉದಾತ್ತವಾಗಿರತಕ್ಕಂತಹ ಧ್ಯೇಯಗಳಿಂದ ಎಲ್ಲಾ ಕಡೆಗೂ ಕೂಡ ಬೋರ್‌ವೆಲ್‌ಗಳನ್ನು ಹಾಕುವುದಕ್ಕೆ ಹೋದರು. ಬೋರ್‌ವೆಲ್‌ಗಳು 120-150ಅಡಿಗಳವರೆಗೆ ಕೊರೆದರೂ ನೀರು ಸಿಗುತ್ತಾ ಇಲ್ಲ. ಇವತ್ತಿನ ದಿವಸ ಅಭಾವ ಪರಿಸ್ಥಿತಿಯಿಂದ 150 ಅಲ್ಲ 300 ಅಡಿಗಳವರೆಗೆ ಹೋಗುತ್ತಾ ಇದೆ. ಆದ್ದರಿಂದ ಆಗ ಕೊರೆದ ಬಾವಿಗಳು ಇವತ್ತು ಬರಡಾಗುತ್ತಿವೆ. ಮತ್ತು ನಾವು ಇನ್ನು 300 ಅಡಿಗೂ ಜಾಸ್ತಿ ಹೋಗಬೇಕಾಗುತ್ತದೆ. ಆದ್ದರಿಂದ ಸ್ವಲ್ಪ ವ್ಯಾಪಕವಾಗಿ ಯೋಚನೆ ಮಾಡತಕ್ಕಂತಹ ಅವಶ್ಯಕತೆ ಬಹಳ ಇದೆ. ಅದರಲ್ಲೂ ಹುಣಸೂರು ತಾಲ್ಲೂಕಿನಲ್ಲಿ ಇಷ್ಟು ನಾವು ಮಾಡಿದ್ದೇವೆ. 800 ಕೊಳವೆ ಬಾವಿ ಹಾಕಿದ್ದೇವೆ. ಇನ್ನೂ ಜಾಸ್ತಿ ಬೇಕು ಅಂಥ ಹೇಳಿದರು, ಅದರ ಬಗ್ಗೆ ಕೂಡ ಪರಿಶೀಲನೆಗಾಗಿ ಕಳುಹಿಸಿದ್ದೇವೆ. ಕೆಲವು ಸ್ಯಾಂಕ್ಷನ್ ಮಾಡಿದ್ದೇವೆ ಮತ್ತೆ ಇನ್ನೂ ಹೊಚ್ಚು ಬೇಕೆಂದರೆ ಅವರು ಮಳೆಗಾಲವನ್ನು ಕಾಯುವುದು ಒಳ್ಳೆಯದು ಅಂಥ ನನ್ನ ಭಾವನೆ.

ಅಧ್ಯಕ್ಷರು : ಅವರು ಹೇಳಿದ್ದು ಕೊಳವೆ ಬಾವಿ ರಿಪೇರಿ ಬಗ್ಗೆ.

ಶ್ರೀ ಬಿ. ಬಸವಲಿಂಗಪ್ಪ : ರಿಪೇರಿ ಕೂಡ ಮಾಡುತ್ತಿದ್ದೇವೆ. ನಾವು 24 ಡ್ರಿಲ್ಲಿಂಗ್ ಮಿಶಿನ್ಸ್ ಏನಿವೆ, ಅದಕ್ಕೋಸ್ಕರ ನಾವು ಇಟ್ಟಿದ್ದೇವೆ. ಅದನ್ನು ರಿಪೇರಿ ಮಾಡುವುದಕ್ಕೆ ನಾವು ಸರ್ವ ಪ್ರಯತ್ನ ಮಾಡುತ್ತೇವೆಂದು ಆಶ್ವಾಸನೆ ಕೊಡುತ್ತೇನೆ.

(ಗೊಂದಲ)

ಶ್ರೀಮತಿ ಚಂದ್ರಪ್ರಭಾ ಅರಸ್ : ಸನ್ಮಾನ್ಯ ಅಧ್ಯಕ್ಷರೇ ಕುಡಿಯುವ ನೀರಿನ ಅಧ್ಯತೆಯ ಪ್ರಶ್ನೆ. ಜಾನುವಾರುಗಳಿಗಾಗಿ ಬೇರೆ ಕೆರೆಕಟ್ಟೆಗಳಿದ್ದರೆ ನೀರು ಸಿಗುತ್ತದೆ. ಆದರೆ ಇವತ್ತು ಬೋರ್‌ವೆಲ್‌ಗಳಲ್ಲಿ ಏನಾಗಿದೆ, ಅದನ್ನು ನೀರು ಹೊಡೆದು ಯಾರಾದರೂ ಅದರ ನೀರನ್ನು ಹೊರಗಡೆಗೆ ಬಸಿದುಕೊಡಬೇಕೇ ವಿನಃ ನೇರವಾಗಿ ಜಾನುವಾರುಗಳು ಇದರ ನೀರನ್ನು ಕುಡಿಯುವುದಕ್ಕಾಗುವುದಿಲ್ಲ. ಇದರಿಂದಾಗಿ ಏನಾಗಿದೆಯೆಂದರೆ ಹೆಚ್ಚಿನ ಸಂಖ್ಯೆಯಲ್ಲಿ ಬೋರ್‌ವೆಲ್‌ನ್ನು ಹಾಕಲೇಬೇಕೆಂದು ನಾವು ಕೇಳುತ್ತಿಲ್ಲ. ಬೋರ್‌ವೆಲ್‌ಗಳ ಸಂಖ್ಯೆಯನ್ನು ಕಡಿಮೆ ಮಾಡಿ, ಮಿನಿ ವಾಟರ್ ಸ್ಕೀಮ್ ಜಾರಿಗೆ ತಂದು 2-3 ಎಕ್ಕಪಕ್ಕದ ಹಳ್ಳಿಗಳನ್ನು ಸೇರಿಸಿ ಮಿನಿ ವಾಟರ್ ಸ್ಕೀಮ್ ತೆಗೆದುಕೊಳ್ಳುವುದಾದರೆ ಅನುಕೂಲವಾಗುತ್ತದೆ. ಉದಾಹರಣೆಗೆ ಹೇಳುತ್ತೇನೆ. ಇವತ್ತು ಇಂಜಿನಿಯರುಗಳ ಪ್ರಕಾರ 15ರಿಂದ 20ಸಾವಿರದವರೆಗೆ ಒಂದು ಬೋರ್‌ವೆಲ್‌ಗಾಗಿ ಖರ್ಚು ಬೀಳುತ್ತದೆ. ಸಾಲ್ಕು ಬೋರ್‌ವೆಲ್‌ಗಳು ಸೇರಿದರೆ ಒಂದು ಲಕ್ಷವಾಗುತ್ತದೆ. 6 ಬೋರ್‌ವೆಲ್ ಪೈಲ್ಯೂರ್ ಆಗಿರತಕ್ಕಂತಹ ಹಳ್ಳಿಗಳು ಇವೆ. 6-7 ಬೋರ್‌ವೆಲ್ ಹಾಕಿ ಅಲ್ಲಿ ಪೈಲ್ಯೂರ್ ಆಗಿವೆ. ಅದಕ್ಕೆ ಇದು ಒಂದು ಪರ್ಯಾಯ ವ್ಯವಸ್ಥೆ ಇಲ್ಲ. ಆದ್ದರಿಂದ ಕುಡಿಯುವ ನೀರಿಗೆ ಮಿನಿ ವಾಟರ್ ಸ್ಕೀಮ್‌ಗಳನ್ನು ಹೆಚ್ಚಿನ ಒಂದು ಸಂಖ್ಯೆಯಲ್ಲಿ ತಾವು ತೆಗೆದುಕೊಳ್ಳುವುದಕ್ಕೆ ಮನಸ್ಸು ಮಾಡಬೇಕೆಂದು ತಮ್ಮ ಮುಖೇನ ಗ್ರಾಮೀಣಾಭಿವೃದ್ಧಿ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ : ಅವರು ಹೇಳಿದ ಅಭಿಪ್ರಾಯವನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಈಗ ಇಲ್ಲಿ ಖಾಯಂ ಆಗಿ ವರ್ತೆ ನೀರು ಸಿಗುತ್ತದೆ. ಆ ವರ್ತೆ ನೀರಿನಿಂದ ಬರೀ 3-4 ಮತ್ತು 5 ಹಳ್ಳಿಗಳಿಗೆ ಈಗ ನೀರು ಸರಬರಾಜು ಮಾಡುಲಾಗುತ್ತದೆ. ನೀರು ಇಲ್ಲದೇ ಇರತಕ್ಕ ಹಳ್ಳಿಗಳಿಗೆ ಇಂಥ ಒಂದು ಯೋಜನೆಯನ್ನು ಜಾರಿ ಮಾಡಬೇಕೆಂದು ನಾವು ಯೋಚನೆ ಮಾಡುತ್ತಿದ್ದೇವೆ. ಖಾಯಂ ಆಗಿ ವರ್ತೆ ನೀರು ಸಿಗತಕ್ಕಂತಹ ಸ್ಥಳಗಳನ್ನು ನೀವು ಹುಡಿಕಿದರೆ ನಾವು ಖಂಡಿತ ಅದರ ಕಡೆಗೆ ಕೊಟ್ಟು ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಸಭಾಧ್ಯಕ್ಷರೇ, ಈ ಬೋರ್‌ವೆಲ್‌ಗಳ ರಿಪೇರಿ ವಿಚಾರದಲ್ಲಿ ಮೊನ್ನೆ ಸದನದಲ್ಲಿ ಪ್ರಸ್ತಾಪ ಮಾಡಿ ಈ ವ್ಯವಸ್ಥೆಯನ್ನು ಬದಲಾವಣೆ ಮಾಡಬೇಕೆಂದಾಗ ಮಾನ್ಯ ಸಚಿವರು ಅದಕ್ಕೆ ಬೇರೆ ಒಂದು ಹೇಳಿಕೆ ಕೊಡತಕ್ಕಂತಹ ಮಾತು ಹೇಳಿದರು. ಹೇಳಿಕೆ ಕೊಟ್ಟರೂ ಸಹ ಬೋರ್ ವೆಲ್ ಇವತ್ತು ಏನು ಹಳೆಯ ವ್ಯವಸ್ಥೇ ಇದೆ ಅದು ಹೊಸ ವ್ಯವಸ್ಥೆಗೆ ಬದಲಾವಣೆ ಆಗಿಲ್ಲ. ಇವತ್ತು ಯಾವ ಹಳ್ಳಿಗಳಿಗೆ ಹೋಗಲಿ ನಮ್ಮ ತಾಲ್ಲೂಕುಗಳಿಗೆ ಹೋಗಲಿ ಅಧ್ಯಕ್ಷರೇ ನಾವು ಮರ್ಯಾದೆಯಿಂದ ಓಡಾಡುವುದಕ್ಕೆ ಆಗುತ್ತಿಲ್ಲ. ಪ್ರತಿ ಹಂತದಲ್ಲೂ ನಾವು ಇವತ್ತು ಜನರ ಆಕ್ರೋಶವನ್ನು ಎದುರಿಸಬೇಕಾಗಿದೆ, ಆದ್ದರಿಂದ ದಯವಿಟ್ಟು ಬೋರ್‌ವೆಲ್ ರಿಪೇರಿ ಮಾಡುವ ಸಿಸ್ಟಂ ಏನಿದೆ, ಈ ಬಗ್ಗೆ ಒಂದು ಕಮಿಟಿಯನ್ನು ಮಾಡಿ ನಮ್ಮನ್ನೆಲ್ಲಾ ಕರೆಯಿರಿ, ನಾವು ಸಲಹೆ ಕೊಡುತ್ತೇವೆ. ಈಗಿರತಕ್ಕಂತಹ ಸಿಸ್ಟಂಗೆ ಬದಲಾಗಿ ಇನ್ನು 2-3 ಯೂನಿಟ್‌ಗಳನ್ನು ಸೇರಿಸಿ ಗ್ರಾಮಾಂತರ ಪ್ರದೇಶದಲ್ಲಿ ಬೋರ್‌ವೆಲ್ ರಿಪೇರಿ ಮಾಡತಕ್ಕಂತಹದ್ದು ಬಹಳ ಅತ್ಯಗತ್ಯವಾಗಿದೆ. ಆದುದರಿಂದ ದಯವಿಟ್ಟು ಇದರ ಬಗ್ಗೆ ಗಮನ ಹರಿಸಬೇಕು.

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಶಿವರಾಮೇಗೌಡರು ಬಹಳ ತಡವಾಗಿ ಬಂದಿರುವಂತೆ ಕಾಣುತ್ತದೆ. ಇದರ ಬಗ್ಗೆ ಈಗಾಗಲೇ ಸದನದಲ್ಲಿ ಉತ್ತರವನ್ನು ಕೊಟ್ಟಿದ್ದೇವೆ. ಜಿಲ್ಲಾಪರಿಷತ್ ಈ ರಿಪೇರಿ ಕೆಲಸಗಳನ್ನು ಮಾಡಬೇಕಾಗುತ್ತದೆ ಆದು 80 ಪರ್ಸೆಂಟ್ ಜಿ.ಆರ್.ವೈ. ಯೋಜನೆಗಳಲ್ಲಿ ಮಂಡಲ್‌ಗಳಿಗೆ ಬರುತ್ತದೆ. 20 ಪರ್ಸೆಂಟ್ ಜಿಲ್ಲಾಪರಿಷತ್‌ನಲ್ಲಿ ಇಟ್ಟುಕೊಳ್ಳುತ್ತಾರೆ. ಮಂಡಲ್‌ನವರು ಮಾಡಲಿಕ್ಕೆ ಆಸಕ್ತಿ ಇರುವುದಿಲ್ಲ. ಆದ್ದರಿಂದ ಇವರೇ ರಿಪೇರಿ ಮಾಡಿ ಆ ಹಣವನ್ನು ಬಿಡುಗಡೆ ಮಾಡುವಾಗ ಕಡಿಮೆ ಮಾಡಿಕೊಂಡು ಕಳುಹಿಸಬಹುದು ಎಂದು ಹೇಳಿದೆ. ಅದರ ಬಗ್ಗೆ ತೀಕ್ಷಣವಾಗಿ ಸಂದೇಶ ಕೊಟ್ಟಿದ್ದೇವೆ. ಮತ್ತು ಆರ್ಡರ್ ಮಾಡಿದ್ದೇವೆ ಎಲ್ಲರಿಗೂ ತಾಕೀತು ಮಾಡಿದ್ದೇವೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಜನತೆಗೆ ಬಹಳ ನೀರಿನ ತೊಂದರೆ ಇದೆ. ತಾವೇ ವಹಿಸಿಕೊಳ್ಳಿ ಎಂದು ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ : ನೀವು ವಿಕೇಂದ್ರೀಕರಣಕ್ಕೆ ವಿರೋಧವೇ.

ಅಧ್ಯಕ್ಷರು : ಇದು ಒಂದನ್ನು ಕೇಂದ್ರೀಕರಣ ಮಾಡಿಕೊಳ್ಳಿ ಎಂದು ಹೇಳುತ್ತಿದ್ದಾರೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಸರ್ಕಾರಕ್ಕೆ ನಮ್ಮ ಕಳಕಳಿ ಅರ್ಥವಾಗುತ್ತಿದೆ. ಆದರೆ ಪ್ರಯೋಜನ ಮಾತ್ರ ಸಾಮಾನ್ಯ ಜನರಿಗೆ ಮುಟ್ಟಿಲ್ಲ. ಮಂಡ್ಯದಲ್ಲಿ ಮೊನ್ನೆ ನಡೆದಂಥ ಜಿಲ್ಲಾಪರಿಷತ್ ಮೀಟಿಂಗ್‌ನಲ್ಲಿ ನಾನು ಕುಳಿತು ನೋಡಿದ್ದೇವೆ. ನಾಗಮಂಗಲದಲ್ಲಿ ಬೋರ್‌ವೆಲ್ ರಿಪೇರಿಗೆ ಟೂಲ್ಸ್ ಇಲ್ಲವೆಂದು ಹೇಳುತ್ತಾರೆ. ಟೂಲ್ಸ್ ಎಲ್ಲಿ ಎಂದು ಕೇಳಿದರೆ ದುಡ್ಡಿಲ್ಲವೆಂದು ಜಿಲ್ಲಾಪರಿಷತ್‌ನವರು ಹೇಳುತ್ತಾರೆ. ಆದ್ದರಿಂದ ಶೀಘ್ರವಾಗಿ ಕ್ರಮ ತೆಗೆದುಕೊಳ್ಳದಿದ್ದರೆ ಜನ ಆಹಾಕಾರ ಆಗುತ್ತದೆ. ಏತಕ್ಕೆಂದರೆ ಇನ್ನು 2-3

ತಿಂಗಳೇ ಈ ಬರಗಾಲವಿರತಕ್ಕಂಥದ್ದು. ಆದ್ದರಿಂದ ಅದರ ಬಗ್ಗೆ ತೀವ್ರ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ : ಆಯಿತು.

ಶ್ರೀಮತಿ ದಮಯಂತಿ ಬೋರೇಗೌಡ : ಇಷ್ಟೊಂದು ಬೋರ್‌ವೆಲ್‌ಗಳು ಫೈಲ್ಯೂರ್ ಆಗಿರುವುದರಿಂದ ಮಿನಿವಾಟರ್ ಸಪ್ಲೈ ಆಧ್ಯತೆಯನ್ನು ಕೊಟ್ಟರೆ ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ : ಇದು ಒಳ್ಳೆಯದೆಂದು ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, 2-3 ಹಳ್ಳಿಗಳನ್ನು ಸೇರಿಸಿ ಕಿರು ನೀರು ಸರಬರಾಜು ಯೋಜನೆಯನ್ನು ಮಾಡಲಿಕ್ಕೆ ಸರ್ಕಾರ ಸಿದ್ದವಿದೆ ಎಂದು ತಿಳಿಸಿದ್ದಾರೆ. ಇದಕ್ಕೆ ಮಾನ್ಯ ಬಸವಲಿಂಗಪ್ಪರವರನ್ನು ಅಭಿನಂಧಿಸುತ್ತೇನೆ. ಈಗಾಗಲೇ ಕೋಲಾರ ಜಿಲ್ಲೆಯ ಜಿಲ್ಲಾಪರಿಷತ್ ಮೂಲಕ ನಿಮ್ಮ ಇಂಜಿನೀಯರ್-ಇನ್-ಚೀಫ್ ಆಗಿರುವವರು ಕಳುಹಿಸಿಕೊಟ್ಟಿರತಕ್ಕಂಥ ಒಂದು ನಿರ್ದೇಶನದ ಮೇಲೆ ಜಿಲ್ಲಾಪರಿಷತ್‌ನಲ್ಲಿರತಕ್ಕಂಥ ಎಲ್ಲ ಮಾನ್ಯ ಸದಸ್ಯರು, ಶಾಸಕರು, ಅಧ್ಯಕ್ಷರು ಎಲ್ಲ ಸೇರಿ ಆ ರೀತಿಯಾದ ಒಂದು ಪಟ್ಟಿಯನ್ನು ಇಂಜಿನೀಯರ್-ಇನ್-ಚೀಫ್ ಅವರಿಗೆ ಕಳುಹಿಸಿದ್ದಾರೆ. ಅದಕ್ಕೆ ಸರ್ಕಾರದವರು ಮಂಜೂರಾತಿಕೊಟ್ಟು ಅಥವಾ ಇಂಜಿನೀಯರ್-ಇನ್-ಚೀಫ್‌ರವರಿಗೆ ಆ ಎಲ್ಲ ಯೋಜನೆಗಳನ್ನು ಕೈಗೆತ್ತಿಕೊಂಡು ಈ ವರ್ಷವೇ ಮಾಡಲು ನಿರ್ದೇಶನವನ್ನು ಕೊಡುತ್ತೀರಾ?

ಶ್ರೀ ಬಿ. ಬಸವಲಿಂಗಪ್ಪ: ಮಾನ್ಯ ಸದಸ್ಯರ ಸಲಹೆ ಒಳ್ಳೆಯದು.

ಶ್ರೀ ಸಿ. ಬೈರೇಗೌಡ: ಮಾನ್ಯ ಸಚಿವರು ಮಾಡುತ್ತೇವೆ ಅಥವಾ ಇಲ್ಲವೆಂದು ಹೇಳಲಿ. ಪ್ರಪೋಸಲ್ಸ್ ನಿಮ್ಮ ಹತ್ತಿರವೇ ಇದೆ. ಆದ್ದರಿಂದ ಮಾಡುತ್ತೇವೆ ಅಥವಾ ಇಲ್ಲ ಇವರೆಡರ ಪೈಕಿ ಒಂದು ಹೇಳಲಿ?

ಶ್ರೀ ಬಿ. ಬಸವಲಿಂಗಪ್ಪ: ದುಡ್ಡುಬೇಕಲ್ಲ.

ಶ್ರೀ ಸಿ. ಬೈರೇಗೌಡ: ಆ ಪ್ರಶ್ನೆ ಬೇರೆ, ಕುಡಿಯಲಿಕ್ಕೆ ಜನರಿಗೆ ನೀರು ಬೇಕಲ್ಲ

ಶ್ರೀ ಬಿ. ಬಸವಲಿಂಗಪ್ಪ: ಮಾನ್ಯ ಅಧ್ಯಕ್ಷರೇ ಇದು ಬಹಳ ಗುರುತರವಾದ ಸಮಸ್ಯೆಯಾಗಿರುವುದರಿಂದ ಉತ್ತರವನ್ನು ಸವಿಸ್ತಾರವಾಗಿಕೊಡಬೇಕಾಗುತ್ತದೆ. ಮಾನ್ಯ ಬೈರೇಗೌಡರು ಅವರು ಪ್ರೊಪೋಸಲ್ಸ್ ಇದೆ ಎಂದು ಹೇಳಿದ್ದಾರೆ. ಅದರ ಬಗ್ಗೆ ಈಗ ತಾನೇ ನೋಡಿದ್ದೇನೆ.

ಶ್ರೀ ಸಿ. ಬೈರೇಗೌಡ: ಮಾನ್ಯ ಅಧ್ಯಕ್ಷರೇ ಈಗತಾನೇ ನೋಡಿದ್ದೇನೆಂದು ಹೇಳುತ್ತಿದ್ದಾರೆ. ಆದರೆ ಹತ್ತಾರು ಸಾರಿ ಇದೇ ವಿಚಾರವನ್ನು ಅವರು ಸದನದಲ್ಲಿರುವಾಗಲೆಲ್ಲ ಹೇಳಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ: ಈಗ ಬೈರೇಗೌಡರು ಹೇಳತಕ್ಕಂಥ ವಿಚಾರ ಏನಿದೆ. ಅದನ್ನು ಮಾಡುತ್ತೇವೆಂದು ಹೇಳಿದ್ದೇನೆ. ಅದಕ್ಕೆ ಹಣ ಬೇಕಾಗಿದೆ. ಈ ವರ್ಷ ಮುಗಿಯುತ್ತಾ ಬಂದಿದೆ. ಅದಕ್ಕೆ ಒಂದು ಸಮಗ್ರವಾದ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಕೋಲಾರ ಜಿಲ್ಲೆಯಲ್ಲಿರತಕ್ಕಂಥ ಸಮಸ್ಯೆ ನನಗೆ ಗೊತ್ತಿದೆ. ಅಲ್ಲಿ 300 ಅಡಿಗಿಂತಲೂ ಕೆಳಗೆ ಹೋಗಿದೆ. ಆದ್ದರಿಂದ ಈಗ ಖಾಯಂ ಆಗಿ ಸಿಗತಕ್ಕಂಥ ನೀರಿನ ಒಂದು ನೆಲೆ ಸಿಗಬೇಕಲ್ಲ. ನಾನೇ ನಿಮ್ಮ ಜೊತೆಗೆ ಬರುತ್ತೇನೆ. ಹೋಗೋಣ. ಜನರಿಗೆ ನೀರು ಒದಗಿಸತಕ್ಕ ಕೆಲಸಕ್ಕೆ ನೀವು ಯಾವಾಗ ಕರೆದರೂ ನಾನು ಬರುತ್ತೇನೆ. ನಾಳೆಯೇ ಬೇಕಾದರೆ ಹೋಗೋಣ.

ಅಧ್ಯಕ್ಷರು: ನಾಳೆ ಅಸೆಂಬ್ಲಿ ಇದೆ, ಅಸೆಂಬ್ಲಿ ಕಾರ್ಯಕ್ರಮ ಮುಗಿದ ಮೇಲೆ ಕರೆದುಕೊಂಡು ಹೋಗಿ.

ಶ್ರೀಮತಿ ಚಂದ್ರಪ್ರಭಾ ಅರಸು: 1981 ಜನಗಣತಿ ಆದಮೇಲೆ ಕಳೆದ ಹತ್ತಾರು ವರ್ಷಗಳಿಂದ ಜನಸಂಖ್ಯೆ ಸಾಕಷ್ಟು ಏರಿದೆ. ಕುಡಿಯುವ ನೀರಿನ ಕೊರೆತೆ ಬಹಳ ಇದೆ. ಈ ಸಮಸ್ಯೆಯನ್ನು ಬಗೆಹರಿಸಬೇಕಾದರೆ 1981ರ ಜನಗಣತಿಯ ಆಧಾರವನ್ನು ಸಡಿಲಗೊಳಿಸಿ ಈಗಿನ ಜನಸಂಖ್ಯೆಯ ಆಧಾರವನ್ನು ತೆಗೆದುಕೊಂಡು 2-3 ಹಳ್ಳಿಗಳನ್ನು ಸೇರಿಸಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿದರೆ ಖರ್ಚು ಕಡಿಮೆ ಬೀಳುತ್ತದೆ. ಈ ದಿಸೆಯಲ್ಲಿ ಪ್ರಯತ್ನ ಮಾಡಿ ಕುಡಿಯುವ ನೀರನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತದೆಯೇ? ಈ ಕೆಲಸವನ್ನು ತಾಲ್ಲೂಕು ಪಂಚಾಯಿತಿಗಳಿಗೆ ವಹಿಸಿಕೊಟ್ಟರೆ ಒಳ್ಳೆಯದು. ಏಕೆಂದರೆ ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತುಗಳಲ್ಲಿ ಹಣ ಇಲ್ಲವೆಂದು ಹೇಳುತ್ತಾರೆ. ಇರತಕ್ಕ ಬೋರ್ ವೆಲ್ ಗಳು ಕೂಡ ರಿಪೇರಿ ಆಗುತ್ತಿಲ್ಲ. ಆದ್ದರಿಂದ ತಾಲ್ಲೂಕು ಪಂಚಾಯಿತಿಗೆ ಇದನ್ನು ವಹಿಸಿಕೊಟ್ಟು ಸರ್ಕಾರ ಹಣಕಾಸಿನ ಏರ್ಪಾಡು ಮಾಡಿದರೆ ಒಳ್ಳೆಯದೆಂದು ಮಾನ್ಯ ಸಚಿವರನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಸದಸ್ಯೆಯವರು ವಾರದ ಹಿಂದೆ ನನಗೊಂದು ಪತ್ರ ಬರೆದಿದ್ದಾರೆ. ಆ ಪತ್ರದ ಪ್ರಕಾರ ನೀರು ದೊರೆಯತಕ್ಕ ಜಾಗಗಳು ಎಲ್ಲೆಲ್ಲಿವೆ ಮತ್ತು ಯಾವ ಯಾವ ಗ್ರಾಮಗಳಿಗೆ ನೀರು ಒದಗಿಸಬೇಕೆಂಬ ವಿವರವನ್ನು ತಕ್ಷಣ ಕಳುಹಿಸಿ ಕೊಡಬೇಕೆಂದು ನಮ್ಮ ಅಧಿಕಾರಿಗಳಿಗೆ ಹೇಳಿದ್ದೇನೆ.. ಅವರಿಂದ ವರದಿ ಬಂದ ತಕ್ಷಣ ಈ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ. 1981ರ ಜನಗಣತಿ ಆಧಾರದ ಮೇಲೆ ಕುಡಿಯುವ• ನೀರಿನ ಯೋಜನೆಯನ್ನು ತೆಗೆದುಕೊಳ್ಳುತ್ತಿದ್ದೀರಿ, ಅದನ್ನು ಸ್ವಲ್ಪ ಸಡಿಲ ಮಾಡಬೇಕೆಂದು ಹೇಳಿದ್ದಾರೆ. ಅದನ್ನು ಸಡಿಲ ಮಾಡುವುದಕ್ಕೆ ಸರ್ಕಾರ ತೀರ್ಮಾನ ತೆಗೆದುಕೊಂಡಿದೆ.

ಶ್ರೀ ಆರ್. ನಾರಾಯಣ್ : ಶ್ರೀಮತಿ ಚಂದ್ರಪ್ರಭಾ ಅರಸು ಅವರು ಕೇಳಿರತಕ್ಕ ಪ್ರಶ್ನೆ ಬಹಳ ಸಮಯೋಚಿತವಾಗಿದೆ.1981 ರ ಜನಗಣತಿ ಆಧಾರದ ಮೇಲೆ ಕಿರು ನೀರು ಯೋಜನೆಯಡಿಯಲ್ಲಿ ಕುಡಿಯುವ ನೀರನ್ನು ಕೊಡಬೇಕೆಂದು ಇದೆ. ಈ ನಾರ್ಮ್ಸ್‌ಅನ್ನು ಸಡಿಲ ಮಾಡಬೇಕೆಂದು ಈಗಿನ ಸಚಿವರಿಗೆ ಮತ್ತು ಹಿಂದಿನ ಸಚಿವರಿಗೆ ರಿಕ್ವೀಷಿಷನ್ ಕೊಟ್ಟಿದ್ದೆ. ಎರಡು ಕೀಲೋಮೀಟರ್ ಫಾಸಲೆಯಲ್ಲಿ ಬರತಕ್ಕ ಎಲ್ಲ ಹಳ್ಳಿಗಳಿಗೆ ಮಿನಿ ವಾಟರ್ ಸಪ್ಲೈ ಸ್ಕೀಮ್‌ನ್ನು ಎಕ್ಸ್‌ಟೆಂಡ್ ಮಾಡಬೇಕೆಂದು ಹೇಳಿದ್ದೆ. ಇದರಿಂದ ಹರಿಜನ ಗಿರಿಜನ ಹಾಗೂ ಲಂಬಾಣಿ ತಾಂಡಾಗಳಿಗೆ ಬಹಳ ಅನುಕೂಲವಾಗುತ್ತದೆ. ಮತ್ತು ಕುಡಿಯುವ ನೀರಿನ ಸಮಸ್ಯೆ ಗಣನೀಯವಾಗಿ ಬಗೆಹರಿಯುತ್ತದೆ. ಇದು ಪಾಲಿಸಿ ಮ್ಯಾಟರ್‌ಗೆ ಸಂಬಂಧಪಟ್ಟದ್ದಾದ್ದರಿಂದ ನಾರ್ಮ್ಸ್ ಪ್ರಕಾರ ನಾವು ಕೊಟ್ಟಿದ್ದೇವೆ, ಅದಕ್ಕಿಂತ ಹೆಚ್ಚಿನ ಭಾಗಕ್ಕೆ ಕೊಡುವುದಕ್ಕೆ ಬರುವುದಿಲ್ಲವೆಂದು ಅಧಿಕಾರಿಗಳು ಹೇಳುತ್ತಾರೆ. ಆದ್ದರಿಂದ ಎರಡು ಕಿಲೋಮೀಟರ್ ಫಾಸಲೆಯಲ್ಲಿರತಕ್ಕ ಎಲ್ಲ ಹಳ್ಳಿಗಳ ಬಗ್ಗೆಯೂ ಪಾಲಿಸಿ ಡಿಸಿಷನ್ ಅನ್ನು ಜರೂರಾಗಿ ತೆಗೆದುಕೊಳ್ಳಬೇಕೆಂದು ಮನವಿ ಮಾಡುತ್ತೇನೆ. ಇದಲ್ಲದೆ, ಸಮಸ್ಯಾತ್ಮಕ ಗ್ರಾಮಗಳು ಇವೆ. ಗುಬ್ಬಿ ತಾಲ್ಲೂಕು ಚೋಳೂರು ಹೋಬಳಿಯಲ್ಲಿ 3 ಬೋರ್‌ವೆಲ್‌ಗಳನ್ನು ತೆಗೆದರು. ಜಾಲ್ಗುಣಿ, ಸಡನಹಳ್ಳಿ, ಶಿವನಹಳ್ಳಿಯಲ್ಲಿ ತೆಗೆದ ಈ ಮೂರು ಬೋರ್‌ವೆಲ್‌ಗಳು ಪೈಲ್ಯೂರ್ ಆಯಿತೆಂದು ಗೊತ್ತಾಯಿತು. ನನ್ನ ಪಕ್ಕದ ಹೋಬಳಿಯಲ್ಲಿ ಈ ರೀತಿ ಆಗಿದೆ. ಇಂಥದ್ದಕ್ಕೆ ಪಕ್ಕದ ಹಳ್ಳಿಯ ಕಿರು ನೀರಾವರಿ ಯೋಜನೆಯಿಂದ ನೀರು ಸರಬರಾಜು ಮಾಡಲು ಸರ್ಕಾರ ತೀವ್ರವಾಗಿ ಗಮನ ಹರಿಸಬೇಕು. ಇಂತಹ ಸಮಸ್ಯಾತ್ಮಕ ಗ್ರಾಮಗಳಲ್ಲಿ 3-4 ಬೋರ್‌ವೆಲ್‌ಗಳನ್ನು ತೆಗೆದರೂ ನೀರು ಬಾರದೆ ಇರತಕ್ಕ ಪರಿಸ್ಥಿತಿ ಇದೆ. ಇಂಥ ಗ್ರಾಮಗಳು ಒಂದೊಂದು ತಾಲ್ಲೂಕಿನಲ್ಲಿ 50 ರಿಂದ 100 ಇದ್ದರೆ, ಹೆಚ್ಚಲ್ಲ. ಬೋರ್‌ವೆಲ್

ರಿಪೇರಿ ಬಗ್ಗೆ ನಾನು ಹೆಚ್ಚಿಗೆ ಹೇಳಬೇಕಾಗಿಲ್ಲ. ಮಾನ್ಯ ಬೈರೇಗೌಡರಿಗೂ ಮತ್ತು ಮಾನ್ಯ ಸಚಿವರಿಗೂ 25 ಕೋಟಿ ರೂಪಾಯಿ ಯೋಜನೆ ಬಗ್ಗೆ ಏನು ಘರ್ಷಣೆ ಆಯಿತು ಆ ಬಗ್ಗೆ ಮುಖ್ಯ ಮಂತ್ರಿಗಳು ಹೇಳಿಕೆ ಕೊಡುವುದಾಗಿ ಹೇಳಿದ್ದಾರೆ. ಅದರ ಬಗ್ಗೆ ಈಗಲೇ ಉತ್ತರ ಕೊಡುವುದು ಒಳ್ಳೆಯದೆಂದು ತಮ್ಮ ಮೂಲಕ ಅವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ : ಶ್ರೀಮತಿ ಚಂದ್ರಪ್ರಭಾ ಅರಸ್ ಅವರ ಪ್ರಶ್ನೆಗೆ ಉತ್ತರಿಸುತ್ತಾ ಈ ಬಗ್ಗೆ ಹೇಳಿದ್ದೇನೆ. 1981ರ ಜನಗಣತಿ ಆಧಾರದ ಮೇಲೆ ಈ ಒಂದು ಕುಡಿಯುವ ನೀರಿನ ಯೋಜನೆಗಳನ್ನು ಒಳಪಡಿಸಿಕೊಂಡಿರುವುದನ್ನು ಸಡಿಲ ಮಾಡಬೇಕೆಂದು ಹೇಳಿದ್ದಾರೆ. ಅದನ್ನು ಸಡಿಲ ಮಾಡಿದ್ದೇವೆಂದು ಈಗಾಗಲೇ ಹೇಳಿದ್ದೇನೆ. ಮಾನ್ಯ ನಾರಾಯಣ ಅವರು ತುಮಕೂರು ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಏನು ಹೇಳಿದ್ದಾರೆ. ಅದಕ್ಕೆ ಬೇರೆ ಪ್ರಶ್ನೆ ಕೇಳಿದರೆ ಉತ್ತರಿಸುತ್ತೇನೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : ಇವತ್ತಿನ ದಿವಸ ಜಲಮಟ್ಟ ಕೆಳಗೆ ಹೋಗಿದೆ. ನೀರಿನ ಅಭಾವ ಜಾಸ್ತಿ ಇವೆ ಎಂಬುದನ್ನು ಎಲ್ಲರೂ ಒಪ್ಪಿದ್ದಾರೆ. ಮಾನ್ಯ ಸಚಿವರು ನೀರು ಸಿಗದೆ ಇರತಕ್ಕ ಬಾವಿಗಳನ್ನು ಆಳ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆಂದು ಹೇಳಿದ್ದಾರೆ ಈಗ ಎರಡು ತಿಂಗಳು ನೀರಿನ ತೀವ್ರ ಅಭಾವ ಇರುತ್ತದೆ. ಈ ತೀವ್ರ ಅಭಾವವನ್ನು ಪರಿಹರಿಸುವುದಕ್ಕೆ ಈಗ ಇರತಕ್ಕ ಸರ್ಕಾರಕ್ಕೆ ಮೆಷಿನರಿ ಏನೇನು ಸಾಲದು. ಆದ್ದರಿಂದ ಕುಡಿಯುವ ನೀರಿನ ವಿಷಯ ಅತೀ ಮುಖ್ಯವಾಗಿರುವುದರಿಂದ ಬಾಡಿಗೆಗಾದರೂ ಖಾಸಗಿಯವರಿಂದ ರಿಗ್ ಯಂತ್ರಗಳನ್ನು ತೆಗೆದುಕೊಂಡು ನೀರು ಕೊಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆಯೇ ಸ್ವಾಮಿ?

ಶ್ರೀ ಬಿ. ಬಸವಲಿಂಗಪ್ಪ : ಒಳ್ಳೆಯ ಸಲಹೆ. ನಾವು ಯೋಚನೆ ಮಾಡುತ್ತೇವೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಸನ್ಮಾನ್ಯ ಅಧ್ಯಕ್ಷರೇ, ನೀರಿನ ವಿಷಯ ಬಹಳ ಮಹತ್ವವಾದುದು. ಇದು ಈ ಕಡೆ ಸದಸ್ಯರು ಮತ್ತು ಆ ಕಡೆ ಸದಸ್ಯರ ರಾಜಕೀಯ ಪ್ರಶ್ನೆ ಅಲ್ಲ. ಕರ್ನಾಟಕದ ನಾಲ್ಕು ಕೋಟಿ ಜನರ ಸಮಸ್ಯೆ ಇದು. ಆದ್ದರಿಂದ ಕಂಬೈಂಡ್ ವಾಟರ್ ಸಪ್ಲೈ ಸ್ಕೀಂ ಮಾಡುತ್ತಾರಾ ಎಂದು ಕೇಳುತ್ತೇನೆ. ಮಹಾರಾಷ್ಟ್ರದಲ್ಲಿ ಅದು ಮಾಡಿದ್ದಾರೆ. ಮೂರು ನಾಲ್ಕು ಊರು ಸೇರಿಸಿ ಎಲ್ಲಿ ನೀರು ಸಿಗುತ್ತದೋ ಅಲ್ಲಿ ಬೋರ್‌ವೆಲ್ ಹಾಕಿ ಪೈಪ್ ಮುಖಾಂತರ ನೀರು ಸರಬರಾಜು ಮಾಡುವ ಯೋಜನೆ ಮಹಾರಾಷ್ಟ್ರದಲ್ಲಿದೆ. ಆ ತರಹ ವ್ಯವಸ್ಥೆ ನೀವು ಮಾಡುತ್ತೀರಾ? ರಿಪೇರಿ ಮಾಡುವುದು, ಅಧಿಕಾರ ವಿಕೇಂದ್ರೀಕರಣದ ಪ್ರಶ್ನೆ ಅಲ್ಲ. ಸರ್ಕಾರದವರು ರಿಪೇರಿ ಕಾರ್ಯ ವಹಿಸಿಕೊಳ್ಳಬೇಕು. ಜಿಲ್ಲಾ ಪರಿಷತ್ತಿನವರು ಮತ್ತು ಮಂಡಲ ಪಂಚಾಯಿತಿಯವರು ಮಾಡುವುದಿಲ್ಲ. ನೀರು ಸಿಗುವುದಿಲ್ಲ. ಬೋರ್‌ವೆಲ್‌ನಲ್ಲಿ ಬರೀ ಹೊಗೆ ಬರುತ್ತದೆ, ನೀರು ಬರುವುದಿಲ್ಲ. ಆದ್ದರಿಂದ ದಯವಿಟ್ಟು ಈ ಬಗ್ಗೆ ಸರ್ಕಾರ ವ್ಯವಸ್ಥೆ ಮಾಡಬೇಕು. ಇದು ಮಹತ್ವದ ಪ್ರಶ್ನೆ. ಆದ್ದರಿಂದ ಹೇಳುತ್ತಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಸದಸ್ಯರು ಮಹಾರಾಷ್ಟ್ರ ಗಡಿ ಭಾಗದಲ್ಲಿದ್ದಾರೆ. ನಾನು ಆಗಲೇ ಕನ್ನಡದಲ್ಲಿ ಹೇಳಿದೆ. ತಮ್ಮ ಸಲಹೆ ಪ್ರಕಾರ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು. ನಾಲ್ಕೈದು ಎಂಟು ಹತ್ತು ಹಳ್ಳಿಗಳನ್ನು ಸೇರಿಸಿ ಸಮಗ್ರವಾದ ಯೋಜನೆ ಮಾಡುತ್ತೇವೆ ಎಂದು ಹೇಳಿದೆ. ರಿಪೇರಿ ವಿಚಾರದಲ್ಲಿ ಹೇಳಿದ್ದಾರೆ. ಜಿಲ್ಲಾ ಪರಿಷತ್ತುಗಳು ಯಾವ ಜಿಲ್ಲೆಯಲ್ಲಿ ತಮ್ಮ ಕರ್ತವ್ಯ ಕಾರ್ಯನಿರ್ವಹಣೆ ಮಾಡಿಲ್ಲ ಎಂಬ ಬಗ್ಗೆ ನಮಗೆ ಗೊತ್ತಿಲ್ಲ ಎಂದಲ್ಲ. ಆದರೆ ಕಾನೂನು ತಿದ್ದುಪಡಿ ಮಾಡುವವರೆಗೆ ಇದನ್ನು ಸರ್ಕಾರ ವಹಿಸಿಕೊಂಡು ಮಾಡುವುದಕ್ಕೆ ಸ್ವಲ್ಪ ತೊಂದರೆಯಾಗುತ್ತದೆ. ಈಗಿನ ಜಿಲ್ಲಾ ಪರಿಷತ್ ಆಕ್ಟ್ ಸೆಕ್ಷನ್ 182ಪ್ರಕಾರ ಪಬ್ಲಿಕ್ ಹೆಲ್ತ್ ಇಂಜಿನಿಯರಿಂಗ್ ಏನಿದೆ ಅದನ್ನು ನಾವು ಜಿಲ್ಲಾ ಪರಿಷತ್ತಿಗೆ ಕೊಟ್ಟಿಲ್ಲ. ಆದರೂ ಕೂಡ ಸರ್ಕಾರದ

ಒಂದು ಆಜ್ಞೆ ಪ್ರಕಾರ ಸುಮ್ಮನೆ ....ಅವರಿಗೆ ಕೆಲಸ ಮಾಡಿರಿ ಎಂದು ಕೇಳಿದ್ದೇವೆ. ಅವರು ಮಾಡುತ್ತಾ ಬಂದಿದ್ದಾರೆ. ಅವರು ಮಾಡುವುದಿಲ್ಲ ಎಂದರೆ ತೆಗೆದುಕೊಳ್ಳುವುದಕ್ಕೆ ತಯಾರಾಗಿದ್ದೇವೆ.

ಅಧ್ಯಕ್ಷರು : ಪ್ರಶ್ನೆ ನೀವು ಮಾಡುವುದಿಲ್ಲ, ಅವರು ಮಾಡುತ್ತಾರೆ, ಅಥವಾ ಅವರು ಮಾಡಬಹುದು ಅಲ್ಲ. ಹಾಗೆಂದು ಕಾನೂನಿನ ಚೌಕಟ್ಟಿನಲ್ಲಿ ನಿಮ್ಮ ಅಧಿಕಾರ ವ್ಯಾಪ್ತಿ ಬಗ್ಗೆ ಚರ್ಚೆ ಮಾಡುವುದಕ್ಕಿಂತ ಮುಖ್ಯವಾಗಿ ಇದರ ರಿಸಲ್ಟ್ ಮುಖ್ಯ. ಜನಗಳು ಬಹಳ ಕಷ್ಟದಲ್ಲಿರುವುದರಿಂದ ವಿಶೇಷವಾಗಿ ಒಂದು ತಿಂಗಳಲ್ಲಿ ಸರ್ಕಾರದವರು, ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಜಿಲ್ಲಾ ಪರಿಷತ್ತಿನವರ ಮೂಲಕ ಮಾಡಿಸುತ್ತೀರೋ ಮಂಡಲ ಪಂಚಾಯಿತಿ ಮೂಲಕ ಮಾಡಿಸುತ್ತೀರೋ ಅದು ಜನರಿಗೆ ಸಂಬಂಧಪಟ್ಟಿದ್ದಲ್ಲ. ಕುಡಿಯುವ ನೀರಿನ ಸಮಸ್ಯೆ ಜ್ವಲಂತವಾಗಿರತಕ್ಕದ್ದು. ಅದನ್ನು ಬಗೆಹರಿಸಬೇಕಾಗಿರತಕ್ಕದ್ದು ಸರ್ಕಾರದ ನೈತಿಕ ಜವಾಬ್ದಾರಿ.

ಶ್ರೀ ಬಿ. ಬಸವಲಿಂಗಪ್ಪ : ಕೆಟ್ಟ ಬಾವಿಗಳನ್ನು ಜಿಲ್ಲಾ ಪರಿಷತ್ತಿನವರು ಮಾಡುತ್ತಿಲ್ಲ. ಸರ್ಕಾರದವರೇ ಅದನ್ನು ವಹಿಸಿಕೊಂಡು ಮಾಡಬೇಕು ಎಂದು ಹೇಳುತ್ತಾರೆ. ಖಂಡಿತ ಆಶ್ವಾಸನೆ ಕೊಡುತ್ತಿದ್ದೇನೆ, ಈ ರಿಪೇರಿಗಳನ್ನು ನಾವೇ ಮಾಡುತ್ತೇವೆ.

ಅಧ್ಯಕ್ಷರು : ಸರ್ಕಾರದವರೇ ಮಾಡಬೇಕು. ಏಕೆಂದರೆ ಬಹುತೇಕ ಕಡೆ ಮಾಡುತ್ತಿಲ್ಲ ಮತ್ತು ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲವೆಂದು ಹೇಳಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ : ಸದನ ಮತ್ತು ತಾವು ಏನು ಇಚ್ಛೆ ವ್ಯಕ್ತಪಡಿಸಿದ್ದೀರಿ, ಅದರ ಪ್ರಕಾರ ಸರ್ಕಾರ ಕೆಲಸ ಮಾಡುತ್ತದೆ.

ಶ್ರೀ ಕೆ. ಲಕ್ಕಪ್ಪ : ರಿಪೇರಿ ಮಾಡುವುದಕ್ಕೆ ಹಣ ಇಲ್ಲ ಎಂದು ಹೇಳುತ್ತಾರೆ. ಎರಡು ತಿಂಗಳಲ್ಲಿ ಈ ಕೆಲಸ ಆಗದಿದ್ದರೆ ರಾಜ್ಯ ಉಲ್ಬಣ ಸ್ಥಿತಿಗೆ ಬರುತ್ತದೆ ಎಂದು ತಾವು ಹೇಳಿದ್ದೀರಿ. ಯುದ್ಧದೋಪಾದಿಯಲ್ಲಿ ಈ ಕೆಲಸ ಮಾಡಬೇಕೆಂದು ಭಾಷಣ ಮಾಡಿದ್ದೇ ಮಾಡಿದ್ದು. ಈ ಕಡೆ ಸದಸ್ಯರು ಆ ಕಡೆ ಸದಸ್ಯರು ಮತ್ತು ತಾವು ಸಹ ಹೇಳಿದ್ದೀರಿ. ಇನ್ನು 15 ದಿವಸದಲ್ಲಿ ಇತ್ಯರ್ಥ ಮಾಡಿ ತೀರ್ಮಾನಕ್ಕೆ ಬಂದು ನೀರು ಸಿಗುವುದಕ್ಕೆ ಏನಾದರೂ ಪ್ರಯತ್ನ ಮಾಡುತ್ತೀರಾ? ಸುಮ್ಮನೆ ಭಾಷಣಗಳನ್ನು ಮಾಡಿದರೆ ಜನರು ಒಪ್ಪುವುದಿಲ್ಲ. ಆದ್ದರಿಂದ ಇದರ ಬಗ್ಗೆ ತೀವ್ರವಾಗಿ ಯೋಚನೆ ಮಾಡಿ ಪರಿಹಾರ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಮುಖ್ಯ ಮಂತ್ರಿಗಳು ಇದಕ್ಕೆ ಉತ್ತರ ಹೇಳಬೇಕು ಎಂದು ಹೇಳುತ್ತೇನೆ. ನೀರಿನ ವಿಚಾರದಲ್ಲಿ ಬಹಳ ಕಷ್ಟ ಇದೆ. ಮೆಂಬರ್ಸ್‌ನ್ನು ಜನ ಚೇಸ್ ಮಾಡುತ್ತಾರೆ. ಹಳ್ಳಿಗಳಿಗೆ ಹೋಗುವುದಕ್ಕಾಗುವುದಿಲ್ಲ. ಬಹುಶಃ ಅಧ್ಯಕ್ಷರೂ ಅವರ ಕ್ಷೇತ್ರಕ್ಕೆ ಹೋಗಿರಬಹುದು. ಅಷ್ಟು ತೊಂದರೆ ಇದೆ.

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಸದಸ್ಯರು ವ್ಯಕ್ತಪಡಿಸತಕ್ಕ ಆತಂಕ ಸರ್ಕಾರಕ್ಕಿದೆ. ಈ ಪ್ರಶ್ನೆ ಹುಣಸೂರು ತಾಲ್ಲೂಕಿನದು. ಈಗ ಸಮಗ್ರವಾಗಿ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಕೊಡುವುದಕ್ಕೆ ತಾವು ಅಪ್ಪಣೆ ಕೊಟ್ಟರೆ ತಯಾರಾಗಿದ್ದೇನೆ.

ಅಧ್ಯಕ್ಷರು : ಪ್ರಶ್ನೆ ಹುಣಸೂರು ತಾಲ್ಲೂಕಿನದು. ಸಮಸ್ಯೆ ರಾಜ್ಯದ್ದು. ರಾಜ್ಯದ ಸಮಸ್ಯೆ ಹುಣಸೂರಿನ ಮೂಲಕ ಪ್ರಾತಿನಿಧಿಕ ಸ್ವರೂಪದಲ್ಲಿ ಸದನದ ಮುಂದೆ ಬಂದಿದೆ.

ಶ್ರೀ ವಾಟಾಳ್ ನಾಗರಾಜ್ : ಕನಿಷ್ಠ ಸರಾಸರಿ 25 ಸಾವಿರ ಕೊಳವೆ ಬಾವಿಗಳಾದರೂ ರಾಜ್ಯದಲ್ಲಿ ಕೆಟ್ಟಿವೆ.

ಶ್ರೀ ಕೆ.ಹೆಚ್. ರಂಗನಾಥ್ : ಈ ಸಮಸ್ಯೆಯ ತೀವ್ರತೆಯನ್ನು ಮನಗಂಡು ಮಾನ್ಯ ಮಂತ್ರಿಗಳು ಎಲ್ಲಾ ಜಿಲ್ಲಾ ಪರಿಷತ್ತುಗಳಿಗೆ ಈ ವಾರದಲ್ಲೇ ಪತ್ರ ಬರೆದು

ಅವರ ಕೈಯಲ್ಲಿ. ಇದನ್ನು ಮಾಡುವುದಕ್ಕೆ ಆಗುತ್ತದೋ ಇಲ್ಲವೋ ಎಂದು ತಿಳಿದು, ಇಲ್ಲ ಎಂದರೆ ಸರ್ಕಾರ ತಕ್ಷಣ ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತದೆಯೇ ಹೇಗೆ?

ಶ್ರೀ ಬಿ. ಬಸವಲಿಂಗಪ್ಪ : 2-3 ಸಾರಿ ನಾವು ಹಣ ಬಿಡುಗಡೆ ಮಾಡಿದ್ದೇವೆ. ಆ ಹಣ ಸಾಲದು ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದೀರಿ. ನಾವು ಹೆಚ್ಚಿನ ಹಣವನ್ನು ಬಿಡುಗಡೆ ಮಾಡುವುದಕ್ಕೆ ನಾವು ಹಿಂದು ಮುಂದು ನೋಡುವುದಿಲ್ಲ. ಇಂತಹ ಒಂದು ಅಭಾವ ಪರಿಸ್ಥಿತಿಯಲ್ಲಿ ಈ ಒಂದು ಕಷ್ಟ ನೀಗಿಸುವುದಕ್ಕೆ ನಾವು ಯಾವ ಹೆಜ್ಜೆಯನ್ನು ತೆಗೆದುಕೊಳ್ಳುವುದಕ್ಕೂ ತಯಾರು ಇದ್ದೇವೆ. ಎಲ್ಲೆಲ್ಲಿ ಕೊರತೆ ಇದೆ ಎಂದು ಸಮಗ್ರವಾಗಿ ನೋಡಿ ಇವತ್ತು ಸಾಯಂಕಾಲ ಅಥವಾ ಇನ್ನು 3-4 ದಿವಸಗಳಲ್ಲಿ ತಿಳಿದು ಏನು ಹಣವನ್ನು ಬಿಡುಗಡೆ ಮಾಡಬೇಕೋ ಅದನ್ನು ಮಾಡ್ತುತ್ತೇವೆ.

ಶ್ರೀ ಕೆ.ಹೆಚ್. ರಂಗನಾಥ್ : ನನ್ನ ಪ್ರಶ್ನೆ ನೇರವಾಗಿದೆ. ಇಂತಹ ಜಿಲ್ಲಾ ಪರಿಷತ್ತುಗಳಿಗೆ ಮಂತ್ರಿಗಳ ಇಲಾಖೆಯಿಂದ ಪತ್ರ ಬರೆದು, ಒಂದು ವಾರದ ಒಳಗೆ ಮಾಡುವುದಕ್ಕೆ ಸಾಧ್ಯ ಇದೆಯೇ ಎಂದು ತಿಳಿದುಕೊಂಡು, ಅವರು ಮಾಡುವುದಕ್ಕಾಗುವುದಿಲ್ಲ ಎಂದರೆ ಸರ್ಕಾರ ನೇರವಾಗಿ ಇದರ ಹೊಣೆಯನ್ನು ಹೊರುತ್ತದೆಯೇ ಎಂದು ಕೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಅಧ್ಯಕ್ಷರ ಪ್ರಶ್ನೆಗೆ ನಾನು ಉತ್ತರ ಹೇಳಿದ್ದೇನೆ. ಅವರು ಈಗ ಬಂದರು ಎಂದು ಕಾಣುತ್ತದೆ. ಈ ಕೆಲಸ ನಾನು ಮಾಡುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಹಣವನ್ನು ಬಿಡುಗಡೆ ಮಾಡುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಮಾನ್ಯ ಬಸವಲಿಂಗಪ್ಪನವರು ಹಿರಿಯ ಮಂತ್ರಿಗಳು ಇದ್ದಾರೆ. ಎಲ್ಲ ವಿಷಯಗಳ ಬಗ್ಗೆ ಅವರು ತಕ್ಷಣ ಕಾರ್ಯಪ್ರವೃತ್ತರಾಗುವವರಾಗಿದ್ದು, ಈ ವಿಷಯಕ್ಕೆ ಏಕೆ ಹಿಂಜರಿಯುತ್ತಿದ್ದಾರೆ? ಈ ಬಗ್ಗೆ ಅವು ನಿರ್ದಿಷ್ಟವಾದ ಹೇಳಿಕೆ ಕೊಡಬೇಕು. ಇಲ್ಲದಿದ್ದರೆ ಮಾನ್ಯ ಮಂತ್ರಿಗಳ ಮನೆ ಮುಂದೆ ಉಪವಾಸ ಸತ್ಯಾಗ್ರಹದ ಕಾರ್ಯಕ್ರಮ ಹಾಕಿಕೊಳ್ಳಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಇವತ್ತು ನೀರಿಲ್ಲದೆ ಎಲ್ಲಾ ಹಳ್ಳಿಗಳು ಸ್ಮಶಾನಗಳಾಗುತ್ತಿವೆ. ಈ ರೀತಿ ಸರ್ಕಾರದ ನೀತಿ ಆಗಬಾರದು. ಈ ಬಗ್ಗೆ ಸರ್ಕಾರಕ್ಕೆ ಸಮಗ್ರವಾದ ಕಳಕಳಿ ಇರಬೇಕಾಗುತ್ತದೆ. ಮಂತ್ರಿಗಳು ಈ ದಿನ ಕಾಗದ ಬರೆದರೂ ಅವರು ಉತ್ತರ ಬರೆಯಲು ಒಂದು ವಾರ ಬೇಕಾಗುತ್ತದೆ. ಇಷ್ಟು ಗಂಭೀರ ಪರಿಸ್ಥಿತಿ ಇರುವಾಗ ಜಿಲ್ಲಾ ಪರಿಷತ್ತಿನವರು ಏನು ವ್ಯವಸ್ಥೆ ಮಾಡಿದ್ದಾರೆ?

(ಗೊಂದಲ)

ಶ್ರೀ ಎಂ.ವಿ. ವೆಂಕಟಪ್ಪ: ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ ಎಷ್ಟು ಹಣ ಬೇಕಾಗುತ್ತದೋ ಅಷ್ಟು ಹಣ ಬಿಡುಗಡೆ ಮಾಡುತ್ತೇವೆ ಎಂದು ಹೇಳಿದರು. ಆದರೆ ನಮ್ಮ ಕೋಲಾರ ಜಿಲ್ಲೆಯ ಜಿಲ್ಲಾಪರಿಷತ್ತಿಗೆ ಈ ಬಾಬಿಗಾಗಿ 1 ಕೋಟಿ 23 ಲಕ್ಷ ರೂ. ಬೇಕಾಗುತ್ತದೆಂದು ಯುನಾನಿಮಸ್ಸಾಗಿ ಕೇಳಿದ್ದೇನೆ. ಆದರೆ ಈ ಬಗ್ಗೆ ಇನ್ನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಎರಡನೆಯದಾಗಿ ಇವರು ಕಳುಹಿಸುವ ಸರ್ಕ್ಯುಲರ್‌ನಲ್ಲಿ ಬಹಳ ವ್ಯತ್ಯಾಸಗಳು ಮತ್ತು ತಪ್ಪುಗಳು ಇರುತ್ತವೆ. ಆದ್ದರಿಂದ ವಾರ್ ಫೈಟಿಂಗ್‌ನಲ್ಲಿ ಟೆಲೆಕ್ಸ್ ಮೆಸೇಜ್ ಕಳುಹಿಸಿ ವಿಷಯ ತಿಳಿದು ತೀವ್ರಗತಿಯಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಮಾನ್ಯ ಬಸವಲಿಂಗಪ್ಪನವರ ಕಛೇರಿಯಿಂದ ಈ

ಬಗ್ಗೆ ಸರ್ಕುಲರ್ ಕಳುಹಿಸುವುದಕ್ಕೇ 15 ದಿವಸಗಳು ಆಗುತ್ತವೆ. ಅಷ್ಟು ಹೊತ್ತಿಗೆ ಜನರು ಸತ್ತು ಹೋಗಿರುತ್ತಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಅಧ್ಯಕ್ಷರೇ, ಈಗ ಪರಿಸ್ಥಿತಿ ಏನಾಗಿದೆ ಎಂದರೆ, ಅನೇಕ ಜಿಲ್ಲಾಪರಿಷತ್‌ಗಳಲ್ಲಿ ಬೋರ್‌ವೆಲ್‌ಗಳ ರಿಪೇರಿಯನ್ನು, ಮತ್ತು ಮಿನಿ ವಾಟರ್ ಸಪ್ಲೈ ಸ್ಕೀಮ್‌ಗಳ ರಿಪೇರಿಯನ್ನು ಮಂಡಲ ಪಂಚಾಯಿತಿಗಳಿಗೆ ವಹಿಸಿದ್ದಾರೆ. ಅವರು ಈ ಕೆಲಸವನ್ನು ಹಣ ಇಲ್ಲದೇ ಇರುವುದರಿಂದ ಮಾಡುವುದಕ್ಕಾಗಿಲ್ಲ. ಇಲ್ಲಿ ಪ್ರಶ್ನೆ ಏನೆಂದರೆ, ಕೆಲವು ಮಂಡಲ ಪಂಚಾಯಿತಿಗಳಿಗೆ ಬರಬೇಕಾದ ಅನುದಾನದ ಹಣ ಅವರಿಗೆ ಬಂದಿಲ್ಲ. ಆದ್ದರಿಂದಾಗಿ ಅವರಿಂದ, ಕೆಟ್ಟುಹೋದ ಬಲ್ಬ್‌ಗಳನ್ನೆ, ರೀಪ್ಲೇಸ್ ಮಾಡಲು ಆಗುತ್ತಿಲ್ಲ, ಮಿನಿ ವಾಟರ್ ಸಪ್ಲೈ ರಿಪೇರಿ ಮಾಡುವುದಕ್ಕಾಗುತ್ತಿಲ್ಲ. ಮಾನ್ಯ ಅಧ್ಯಕ್ಷರೇ, ಇಲ್ಲಿ ಹಣ ಬಿಡುಗಡೆ ಮಾಡಬೇಕಾಗಿರುವುದು ಮುಖ್ಯ ಅಂಶ. ಇದು ಮಾನ್ಯ ಮಂತ್ರಿಗಳಿಗೂ ಗೊತ್ತಿದೆ. ಸಮಸ್ಯೆ ಚೆನ್ನಾಗಿ ಅವರಿಗೆ ಅರಿವಿದೆ. ಇವತ್ತು ಜಿಲ್ಲಾಪರಿಷತ್ತಿನ ಅಧ್ಯಕ್ಷರಿಗಾಗಲೀ, ಬೇರೆ ಯಾರಿಗೇ ಆಗಲಿ ಈ ಬಗ್ಗೆ ಬರೆಯುವ ಅವಶ್ಯಕತೆ ಇಲ್ಲ. ಜಿಲ್ಲಾಪರಿಷತ್ತಿಗೆ ಹಣ ಕೊಟ್ಟರೆ, ಮಂಡಲ ಪಂಚಾಯಿತಿಗೆ ಹಣ ಕೊಟ್ಟರೆ ಅಲ್ಲಿ ರಿಪೇರಿ ಮಾಡುವವರು ಯಾರು? ರಿಪೇರಿ ಮಾಡುವವರು ಜಿಲ್ಲಾಪರಿಷತ್ತಿನ ಇಂಜಿನಿಯರ್‌ಗಳೇ, ಅಂದರೆ ಅವರು ಸರ್ಕಾರಿ ಇಂಜಿನಿಯರುಗಳೇ, ಡಿ.ಸಿ. ಮುಖಾಂತರ ಹಣ ಬಿಡುಗಡೆ ಮಾಡಲಿ, ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಗಳ ಮುಖಾಂತರ ಹಣ ಬಿಡುಗಡೆ ಮಾಡಲಿ. ರಿಪೇರಿ ಮಾಡತಕ್ಕ ಮಿಷಿನರಿ, ರೂರಲ್ ಡೆವಲಪ್‌ಮೆಂಟಿನ ಎಂಜಿನಿಯರ್ಸ್. ಆದ್ದರಿಂದ ನನ್ನ ಸಲಹೆ ಏನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಇವತ್ತು ಯಾವುದೇ ಮೂಲದಿಂದ ಜಿಲ್ಲಾಪರಿಷತ್ತುಗಳಿಗೆ ವಿಶೇಷವಾಗಿ ಎಷ್ಟು ಕೋಟಿ ರೂಪಾಯಿ ಹಣವನ್ನು ಕೊಡಬೇಕೋ ಅದಕ್ಕಿಂತಲೂ 5 ಕೋಟಿ ರೂಪಾಯಿ ಹೆಚ್ಚು ಹಣ ಬಿಡುಗಡೆ ಮಾಡಿದರೆ ಈ ಸಮಸ್ಯೆಗೆ ಪರಿಹಾರ ಕಂಡುಹಿಡಿಯುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ: ಮೊನ್ನೆ ದಿವಸ ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ 25 ಕೋಟಿ ರೂಪಾಯಿಗಳನ್ನು ಜಿಲ್ಲಾ ಪರಿಷತ್ತುಗಳಿಗೆ ಕೊಡಬೇಕೆಂಬ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳೇ ಉತ್ತರ ಕೊಡುತ್ತಾರೆಂದು ಹೇಳಿದ್ದರು. ಈಗ ಮಾನ್ಯ ಮುಖ್ಯ ಮಂತ್ರಿಗಳು ಈಗ ಸದನದಲ್ಲಿದ್ದಾರೆ. ಈ 25 ಕೋಟಿ ರೂಪಾಯಿಯನ್ನು ಸರಕಾರ ಬಿಡುಗಡೆ ಮಾಡುತ್ತದೆಯೇ ಅಥವಾ ಮಾಡುವುದಿಲ್ಲವೆ ಎಂದು ಹೇಳಬೇಕು. ಇದರ ಬಗ್ಗೆ ಈ ಸದನದಲ್ಲಿರತಕ್ಕಂಥಹ ಎಲ್ಲಾ ಸದಸ್ಯರದ್ದೂ ಒತ್ತಾಯ ಇದೆ. ಅದರ ಜೊತೆಗೆ ತಾವು ಅಂದರೆ ಅಧ್ಯಕ್ಷರದ್ದೂ ಒತ್ತಾಯ ಇದೆ. ಇನ್ನು 2 ತಿಂಗಳಲ್ಲಿ ಬಹಳ ಭೀಕರವಾದ ಪರಿಸ್ಥಿತಿ ಕುಡಿಯುವ ನೀರಿಗೆ ಬರಲಿದ್ದು, ಎಲ್ಲೆಲ್ಲೂ ಹಾಹಾಕಾರ ಉಂಟಾಗುತ್ತದೆ. ಇದನ್ನು ನಿವಾರಿಸುವುದಕ್ಕೋಸ್ಕರ 25 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದರು ಅದನ್ನು ಕೊಟ್ಟರೆ ರಾಜ್ಯದಲ್ಲಿರತಕ್ಕಂತಹ ಎಲ್ಲಾ ಜಿಲ್ಲೆಗಳಿಗೂ ಅನುಕೂಲವಾಗುತ್ತದೆ. ಮುಖ್ಯವಾಗಿ ಜನರಿಗೆ ಕುಡಿಯುವ ನೀರನ್ನು ಕೊಡುತ್ತೇವೆ ಅಥವಾ ಇಲ್ಲವೆಂದು ಹೇಳಿ. ಬೇರೆ ಎಲ್ಲ ಕೆಲಸಗಳನ್ನು ಬದಿಗಿಟ್ಟು ಸರಕಾರ ಈ ಬಗ್ಗೆ ಗಮನಹರಿಸಬೇಕೆಂದು ಹೇಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು: ಇದರ ಬಗ್ಗೆ ವಿಶೇಷವಾದ ಚರ್ಚೆಗೆ ಅನುವು ಮಾಡಿಕೊಡಬೇಕು. ಈ ಬಗ್ಗೆ ಪ್ರಶ್ನೆ ಉಪ ಪ್ರಶ್ನೆಗಳನ್ನು ಕೇಳುವುದು ಬೇಡ ಎಂದು ತಮ್ಮಲ್ಲಿ ಕೈ ಮುಗಿದು ಕೇಳಿಕೊಳ್ಳುತ್ತೇನೆ. ಎಲ್ಲರ ಮನಸ್ಸಿನಲ್ಲಿ ಇದೇ ಇದೆ. ತಾವು ಇದನ್ನು ಅರ್ಥ ಮಾಡಿಕೊಳ್ಳಿ. ಇದು ಕೇವಲ ಭರವಸೆಯಲ್ಲಿಯೇ ನಿಂತುಹೋಗುವುದು ಬೇಡ ಎಂದು ಹೇಳುತ್ತೇನೆ.

Mr. Speaker: We will take up a special discussion on this question tomorrow evening. Thanks for the provocation.

ಏಕಕಿಂಡಿ ವ್ಯವಸ್ಥೆ ಮೂಲಕ ಸಾಲ.

1477 - ಶ್ರೀ ಜಿ.ಎಸ್. ಆಚಾರ್ (ಬೈಂದೂರು): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಲ್ಪಾವಧಿ, ಮಧ್ಯಮಾವಧಿ, ದೀರ್ಘಾವಧಿ ಸಾಲಗಳನ್ನು ರಾಷ್ಟ್ರೀಕೃತ ಹಾಗೂ ವಾಣಿಜ್ಯ ಬ್ಯಾಂಕುಗಳಲ್ಲಿರುವಂತೆ ಸಹಕಾರಿ ರಂಗದಲ್ಲಿ ಸಹಾ "ಏಕ ಕಿಂಡಿ" ವ್ಯವಸ್ಥೆಯ ಮೂಲಕ ನೀಡುವ ಕುರಿತು ಸರಕಾರ ಪರ್ಯಾಲೋಚಿಸುವುದೇ?

ಆ) ಬೇರೆ ರಾಜ್ಯಗಳಲ್ಲಿ ಈ ಪ್ರಯೋಗ ನಡೆದಿರುವುದನ್ನು ಸರ್ಕಾರ ಗಮನಿಸಿದೆಯೇ?

ಇ) ಸರ್ಕಾರ ಈ ವಿಚಾರದಲ್ಲಿ ಸೂಕ್ತ ಕ್ರಮ ಕೈಗೊಳ್ಳುವುದೇ?

*ಶ್ರೀ ಕೆ.ಹೆಚ್. ಪಾಟೀಲ್, (ಸಹಕಾರ ಸಚಿವರು):

ಅ) ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಗಮನಿಸಿದೆ.

ಇ) ಪರಿಶೀಲಿಸಲಾಗುವುದು.

ಶ್ರೀ ಜಿ.ಎಸ್. ಆಚಾರ್: ಅಲ್ಪಾವಧಿ ಮತ್ತು ಮಧ್ಯಮಾವಧಿ, ದೀರ್ಘಾವಧಿ ಸಾಲಗಳನ್ನು ಏಕಕಿಂಡಿ ವ್ಯವಸ್ಥೆ ಮೂಲಕ ನೀಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ತಿಳಿಸಿದ್ದೀರಿ. ಆದರೆ ಸಾಲ ಬಾಕಿ ಇಲ್ಲ ಎನ್ನುವ ಧೃಡ ಪತ್ರ ಪಡೆಯಲಿಕ್ಕೆ ಸಾಕಷ್ಟು ವಿಳಂಬವಾಗುತ್ತಿದೆ. ಕೆಲವೊಮ್ಮೆಯಂತೂ ರೈತರಿಗೆ ಬಹಳ ವಿಳಂಬವಾಗುತ್ತಿದೆ. ಅದನ್ನು ತಪ್ಪಿಸುವುದಕ್ಕೆ ಏಕಕಿಂಡಿ ವ್ಯವಸ್ಥೆಯನ್ನು ಕರ್ನಾಟಕದಲ್ಲಿ ಸರ್ಕಾರ ಜಾರಿಗೊಳಿಸುವುದೇ? ಇದನ್ನು ಸಹಕಾರಿ ರಂಗದಲ್ಲಿ ಏಕೆ ತರಬಾರದು? ಆಂಧ್ರ ಪ್ರದೇಶದಲ್ಲಿ ಇದನ್ನು ತಂದಿದ್ದಾರೆ. ನಮ್ಮ ಅಧಿಕಾರಿಗಳು ಆಂಧ್ರಕ್ಕೆ ಹೋಗಿ ಅಧ್ಯಯನ ಮಾಡಿ ಬಂದಿದ್ದಾರೆ. ಕರ್ನಾಟಕದಲ್ಲಿ ಏಕೆ ಇದನ್ನು ತರುವುದಕ್ಕಾಗುವುದಿಲ್ಲ. ಅಥವಾ ಬೇರೆ ಬೇರೆ ವ್ಯವಸ್ಥೆ ಬೇಕೆಂದು ಹೇಳುವ ಕೆಲವು ಶಕ್ತಿಗಳು ಇದಕ್ಕೆ ತಡೆಯಾಗಿದ್ದಾರೆಯೇ ಎಂಬ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟವಾದ ಅಭಿಪ್ರಾಯ ಹೇಳಬೇಕು.

ಶ್ರೀ ಕೆ.ಹೆಚ್. ಪಾಟೀಲ್: ಕರ್ನಾಟಕ ರಾಜ್ಯದಲ್ಲಿ ಒಂದೇ ಹಂತದ ಮುಖಾಂತರವಾಗಿ ಸಾಲ ವಿತರಣೆಯಾಗಬೇಕೆಂಬುದು ನನ್ನ ವೈಯಕ್ತಿಕ ಅಭಿಪ್ರಾಯ ಕೂಡ ಆಗಿದೆ. ಸರಕಾರ ಈ ದಿಶೆಯಲ್ಲಿ ವಿಚಾರ ಮಾಡುತ್ತಿದೆ. ಆದರೆ ಇದಕ್ಕಿರತಕ್ಕಂತಹ ಸಾಧಕ ಬಾಧಕಗಳನ್ನು ವಿಚಾರ ಮಾಡಿ ನಂತರ ಸಚಿವ ಸಂಪುಟದ ಮುಂದಿಟ್ಟು ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. ಈಗಾಗಲೇ ನಮ್ಮ ರಾಜ್ಯದ ರಿಜಿಸ್ಟ್ರಾರ್‌ರವರು ಬೇರೆ ಬೇರೆ ರಾಜ್ಯಗಳೊಡನೆ ಚರ್ಚೆ ಮಾಡಿ ಅಲ್ಲಿ ಮಾಡಿದಂತಹ ಅನುಭವಗಳನ್ನು ಆಧರಿಸಿ ಒಂದು ವರದಿಯನ್ನು ಕೊಟ್ಟಿದ್ದಾರೆ. ಆ ವರದಿ ಸರ್ಕಾರದ ಪರಿಶೀಲನೆಯಲ್ಲಿದೆ. ಅದು ಪರಿಶೀಲನೆಯಾದ ನಂತರ ಸಚಿವ ಸಂಪುಟದ ಎದುರಿಗಿಟ್ಟು ಅಲ್ಲಿ ತೆಗೆದುಕೊಂಡ ತೀರ್ಮಾನವನ್ನು ಈ ಸದನದ ಎದುರಿಗಿಡುತ್ತೇನೆ.

ಅರಣ್ಯ ತಪಾಸಣಾ ಕೇಂದ್ರ

1378 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ): ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಅರಣ್ಯ ತಪಾಸಣಾ ಚೆಕ್‌ಪೋಸ್ಟ್ ಸಂಖ್ಯೆ ಎಷ್ಟು?